ಅಂತೂ ಇಂತು ರಾಮಪ್ಪನೊಂದಿಗೆ ಸೀತೆಯ ಬದುಕು ಯಾಥಾರೀತಿ ಸಾಗತೊಡಗಿದೆ. ಬದುಕು ನಾರ್ಮಲ್ ಇದೆಯೆನಿಸಿದಾಗ ಸೀತೆಗೆ ಥ್ಯಾಂಕ್ಸ್ ಹೇಳಿ ಋಣಭಾರವನ್ನು ಇಳಿಸಿಕೊಂಡ ರಾಮಪ್ಪ. ಅವತ್ತು ತನಗೆ ಒಪ್ಪಿಸಿದ್ದ ಬ್ಯಾಗು, ಅದರಲ್ಲಿನ ಏಟಿಎಂ ಕಾರ್ಡು, ಚೆಕ್ ಬುಕ್ಕು, ಸ್ವಲ್ಪ ಕ್ಯಾಷು ಎಲ್ಲವನ್ನೂ ತೆಗೆದು ಸೀತೆ ಗಂಡನ ಕೈಯಲ್ಲಿ ಒಪ್ಪಿಸಿದ್ದಳು. ತನ್ನ ಕರ್ತವ್ಯ ಮುಗಿಯಿತೆಂಬಂತೆ. ಅವನೂ ಇಟ್ಟುಕೋ ಎನ್ನಲಿಲ್ಲ. ಈಗ ಮನೆಯೆಲ್ಲ ಅವನದೇ ಸಾಮಾನಿನಿಂದ ತುಂಬಿದೆ. ನೂರಾರು ದೇವರ ಫೋಟೋಗಳು. ರುದ್ರಾಕ್ಷಿ ಮಾಲೆ, ತುಳಸೀ ಮಾಲೆ, ಸ್ಫಟಿಕದ ಮಾಲೆ, ವಿಭೂತಿ, ಚಂದನ, ಧೂಪ, ಏನೆಲ್ಲ ತುಂಬಿಸಿಟ್ಟುಕೊಂಡಿದ್ದಾನೆ. ರಾಮಪ್ಪ ಈಗ ಹೊರಗಡೆಯೇ ಹೋಗುವುದಿಲ್ಲ. ಯಾರೊಂದಿಗೂ ಬೆರೆಯುವುದಿಲ್ಲ. ಉಳಿದ ಮನೆಭಾರ, ತರಕಾರಿ, ಗ್ರಾಸರಿ ಹೊರಗಿನ ಓಡಾಟವೆಲ್ಲ ಸೀತೆಯ ಹೆಗಲಿಗೆ ಬಿತ್ತು. ಇವನು ಏನಾದರೂ ಅಪರಾಧವೆಸಗಿ ಈ ತರ ವೇಷ ಹಾಕಿಕೊಂಡು ತಲೆಮರೆಸಿಕೊಂಡಿದ್ದಾನೋ ಎಂದು ಸೀತೆ ಸಂಶಯಪಟ್ಟುಕೊಳ್ಳುವಂತಾಗಿದೆ. ಆದರೆ ಆಡುವಂತಿಲ್ಲ, ಅನುಭವಿಸುವಂತಿಲ್ಲ.

ನಡೆಯಲಾರದೇ ಭಾರವಾದ ಕಾಲುಗಳನ್ನು ಒಲ್ಲದ ಮನಸ್ಸಿನಿಂದ ಎತ್ತಿ ಎತ್ತಿ ಇಡುತ್ತಿದ್ದ ಸೀತೆಯನ್ನು ಜೋರು ಗಾಳಿ ಹಿಂದಿನಿಂದ ದಬ್ಬಿ ದಬ್ಬಿ ನಡೆಸುತ್ತಿತ್ತು. ಕಣ್ಣಿಗೆ ಕಂಡ, ಮನಸ್ಸಿಗೆ ತೋಚಿದ ತರಕಾರಿಯನ್ನು ಖರೀದಿಸಿ ಕೈಚೀಲಕ್ಕೆ ಹಾಕಿಕೊಳ್ಳುತ್ತಲೂ ಸೀತೆಯ ಕಣ್ಣಿಗೆ ಬಾಗಿಲಲ್ಲಿ ನಿಂತ ಅಂದಿನ ರಾಮಪ್ಪನ ದೀನ ಮುಖವೂ, ಇಂದಿನ ಬೈಗಳನ್ನು ಉದುರಿಸುತ್ತ ರುದ್ರಾವತಾರದ ಕೋಪಿಷ್ಠ ಮುಖವೂ ನಿಂತು ಅಡ್ಡಕಟ್ಟಿದಂತಾಗುತ್ತಿತ್ತು. ಹೊರಲಾರದ ಭಾರವನ್ನು ಹೊತ್ತಂತೆ ಸೀತೆ ತನ್ನದೇ ಮನೆಗೆ ಹೋಗಲು ಒಲ್ಲೆಯೆನ್ನುತ್ತಿದ್ದ ಮನಸ್ಸನ್ನು ಒಲೈಸುತ್ತ, ಕರ್‍ರಗೆ ಕವಿದ ಮೋಡದ ಇನ್ನೊಂದು ತುದಿಯಲ್ಲಿ ಆಗಸದಲ್ಲಿ ಹೊಂಬಣ್ಣದ ರಮ್ಯತಾಣವೊಂದು ಸೃಷ್ಟಿಯಾಗುವುದನ್ನೆ ನಿಟ್ಟಿಸುತ್ತಾ ಕಚ್ಚಾ ರಸ್ತೆಯಿಂದ ಮೇನ್ ರೋಡಿಗೆ ಬರುವುದಕ್ಕೂ, ಪಟಪಟನೆ ನಾಲ್ಕು ಮಳೆಹನಿ ಉದುರುವುದಕ್ಕೂ 'ಸೀ ಯೂ ಟುಮಾರೋ' ಎನ್ನುವ ಲಕ್ಷ್ಮಣನ ಎಸ್ಸೆಮ್ಮೆಸ್ಸು ಬರುವುದಕ್ಕೂ ಸರಿಯಾಯಿತು.

## ರೇಣುಕಾ ನಿಡಗುಂದಿ

ಕತೆಗಾರ್ತಿ ರೇಣುಕಾ ಧಾರವಾಡದವರು. ಪ್ರಸ್ತುತ ನವದೆಹಲಿಯಲ್ಲಿ ವಾಸ. ಪ್ರಬಂಧ, ಕತೆ, ಕವಿತೆಗಳ ಬರವಣಿಗೆ ಮಾಡಿದ್ದಾರೆ. ನವದೆಹಲಿಯ ಬದುಕಿನ ಚಿತ್ರಣ ಕೊಡುವ 'ದಿಲ್ಲಿ ಡೈರಿಯ ಪುಟಗಳು', ಪಂಜಾಬಿ ಕವಯಿತ್ರಿ ಅಮೃತಾ ಪ್ರೀತಂ ಅವರ ಬದುಕಿನ ಪುಟಗಳ ಬರವಣಿಗೆ 'ಅಮೃತ ನೆನಪುಗಳು' ಅವರ ಪ್ರಕಟಿತ ಪುಸ್ತಕಗಳು. 'ಕಣ್ಣ ಕಣಿವೆ' ಅವರ ಕವಿತೆಗಳ ಸಂಗ್ರಹ. ವಿಮರ್ಶಕ ಪುರುಷೋತ್ತಮ ಬಿಳಿಮಲೆ ಅವರೊಂದಿಗೆ 'ರಾಜಧಾನಿಯಲ್ಲಿ ಕರ್ನಾಟಕ' ಎಂಬ ಪುಸ್ತಕವನ್ನು ಸಂಪಾದಿಸಿದ್ದಾರೆ.